ಕರ್ನಾಟಕ ವಿಧಾನಸಭೆ

ಸೋಮವಾರ 11ನೇ ಜನವರಿ 1993

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು:- ರಾಜ್ಯದ ಮಾಜಿ ಮುಖ್ಯ ಅಭಿಯಂತರರೂ, ಸರ್ಕಾರದ ವಿಶೇಷ ಕಾರ್ಯದರ್ಶಿಗಳೂ, ಖ್ಯಾತ ನೀರಾವರಿ ತಜ್ಞರೂ ಆಗಿದ್ದ ಶ್ರೀ ಬಾಳೆಕುಂದರಗಿಯವರು ಜನವರಿ 7ರಂದು ನಗರದಲ್ಲಿ ರಸ್ತೆ ಅಪಘಾತದಲ್ಲಿ ನಿಧನರಾದ ಸುದ್ದಿಯನ್ನು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತ ಬಾಳೆಕುಂದರಗಿಯವರು ಆಳವಾದ ತಾಂತ್ರಿಕ ಜ್ಞಾನ ಹಾಗೂ ಅಸಾಧಾರಣ ಸಾಮರ್ಥ್ಯಕ್ಕೆ ಹೆಸರಾಗಿದ್ದವರು. ನಿವೃತ್ತರಾದ ಮೇಲೂ ರಾಜ್ಯಕ್ಕೆ ಕಾವೇರಿ ಹಾಗೂ ಕೃಷ್ಣ ನದಿಗಳ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಾ ರಾಜ್ಯದ ಪರ ಸಮರ್ಥವಾದ ಮಂಡಿಸುತ್ತಲೇ ಆಕಸ್ಮಿಕ ಮರಣಕ್ಕೀಡಾದದ್ದು ರಾಜ್ಯದ ದುರಾದೃಷ್ಟ. ಈ ವಿಯೋಗದಿಂದಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಪರಮಾತ್ಮ ನೀಡಲೆಂದು ಈ ಸದನ ಪ್ರಾರ್ಥಿಸುತ್ತದೆ.

(ಮೃತರ ಗೌರವಾರ್ಥ ಸದಸ್ಯರು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.)

(ಸಭೆಯು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು:- ಈ ಸದನ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ರಾಜ್ಯಕ್ಕೆ ರೈಲ್ವೆನಲ್ಲಿ ಆಗಿರುವ ಅನ್ಯಾಯ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ತಮಗೆ ನಾನು ಒಂದು ಪತ್ರವನ್ನು ರಾಜ್ಯಕ್ಕೆ ರೈಲ್ವೆಯಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ಕೊಟ್ಟಿದ್ದೇನೆ. ಕೇಂದ್ರದಲ್ಲಿ ಮುಂದಿನ ತಿಂಗಳು ರೈಲ್ವೆ ಬಜೆಟನ್ನು ಮಂಡಿಸಲಿದ್ದಾರೆ. ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ರೈಲ್ವೆಯಲ್ಲಿ ಆಗಿರತಕ್ಕ ಅನ್ಯಾಯದ ಬಗ್ಗೆ ನಾವು ಇಲ್ಲಿ ಪ್ರಾಮಾಣಿಕವಾಗಿ ಒತ್ತಾಯವನ್ನು ತರಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಪಕ್ಷಾತೀತವಾಗಿ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿದೆ.

ಅಧ್ಯಕ್ಷರು:- ನಮ್ಮ ಸಂಸತ್ ಸದಸ್ಯರು ಇದ್ದಾರೆ ಅವರು ಅಲ್ಲಿ ಒತ್ತಡತರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸಂಸತ್ ಸದಸ್ಯರು ಏನೂ ಮಾಡುತ್ತಾ ಇಲ್ಲ.

ಅಧ್ಯಕ್ಷರು:- ದಯವಿಟ್ಟು ತಾವು ಅವರ ಮೇಲೆ ಪರೋಕ್ಷವಾಗಿ ಆರೋಪ ಮಾಡಬೇಡಿ. ಆ ರೀತಿ ಸಾರಾಸಗಟು ಸಂಸತ್ ಸದಸ್ಯರು ಏನೂ ಮಾಡುತ್ತಾ ಇಲ್ಲ ಎಂದು ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್:- ಸಾರಾಸಗಟು ಅಲ್ಲ ಅಲ್ಪ ಸ್ವಲ್ಪ

ಅಧ್ಯಕ್ಷರು:– ಪಕ್ಷಾತೀತವಾಗಿ ಯಾವುದಾದರೊಂದು ವಿಷಯವನ್ನು ನಾವು ನೀವು ಪ್ರತಿಪಾದನೆ ಮಾಡೋಣ. ಹೋಗುತ್ತಲೆ ರೈಲು ಡೀ–ರೈಲು ಆಗುವುದು ಬೇಡ. ಏತಕ್ಕೆ ಎಂದರೆ ನೀವು ಹೇಳತಕ್ಕದ್ದು ಬಹಳ ಗಹನವಾದ ವಿಷಯವಾಗಿದೆ. ರೈಲ್ವೆ ಬಜೆಟ್ ಫೆಬ್ರವರಿಯಲ್ಲಿ ಬರುತ್ತದೆ, ಹಾಗೆಯೇ ಜನರಲ್‌ಬಜೆಟ್ ಬರುತ್ತದೆ. ಆದ್ದರಿಂದ ನಾನು ತಮಗೆ ಸೂಚನೆ ಮಾಡುವುದೇನೆಂದರೆ, ಪಕ್ಷಾತೀತವಾಗಿ ಈ ಪ್ರಶ್ನೆಯನ್ನು ನಾವು ನೀವು ಯೋಚನೆ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ತಾವು, ವಿರೋಧಪಕ್ಷದ ನಾಯಕರು ಸಭಾನಾಯಕರು ಮತ್ತು ಇತರ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ ನಾಳೆ ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್:– ಕೇಂದ್ರದವರು ಮೊದಲಿನಿಂದಲೂ ನಮ್ಮನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದಾರೆ, ರೈಲ್ವೆ ವಿಷಯದಲ್ಲಾಗಲಿ, ಮಹಾಜನ್ ಕಮಿಷನ್ ವರದಿ ವಿಚಾರದಲ್ಲಾಗಲಿ, ವಿಜಯನಗರ–ಉಕ್ಕು ಕಾರ್ಖಾನೆಯ ವಿಷಯದಲ್ಲಾಗಲಿ, ಈ ರೀತಿ ನಡೆಯುತ್ತಿದ್ದಾರೆ. ಕಾವೇರಿ ಪ್ರಶ್ನೆ ಬಂದಾಗಲೂ ಸಹಾ ಇದೇ ರೀತಿ ನಡೆದಿದೆ. ಕೇಂದ್ರಸರ್ಕಾರದವರ ಧೋರಣೆ ಸರಿಯಲ್ಲ. ಆದುದರಿಂದ ಆ ಧೋರಣೆಯನ್ನು ವಿರೋಧಿಸಬೇಕಾಗಿದೆ. ಈ ಬಗ್ಗೆ ನಾವು ಮಾತನಾಡಬೇಕಾಗಿದೆ. ತಮಗೊತ್ತಿರುವ ಹಾಗೆ ಮೊದಲಿನಿಂದಲೂ ರೈಲ್ವೆನಲ್ಲಿ ಕೇರಳಕ್ಕೆ ಅನುಕೂಲವಾಗಿದೆ, ತಮಿಳುನಾಡಿಗೆ ಅನುಕೂಲವಾಗಿದೆ, ಆಂಧ್ರಕ್ಕೆ ಅನುಕೂಲವಾಗಿದೆ. ಆದರೆ ನಮಗೇನೂ ಅನುಕೂಲವಾಗಿಲ್ಲ.

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರ ಜೊತೆ ಮಾತನಾಡಿ ನಂತರ ನಾಳೆ ವಿಚಾರ ಮಾಡೋಣ. ಈಗ ಸಭಾ ನಾಯಕರು ಇಲ್ಲ. ಆದ್ದರಿಂದ ಅವರ ಜೊತೆ ಮಾತನಾಡಿ ನಾಳೆ ಪ್ರಸ್ತಾಪ ಮಾಡಿ, ಈ ಮಧ್ಯೆ ನಿಮಗೆ 24 ಗಂಟೆ ಅವಕಾಶ ಇದೆ. 24 ಗಂಟೆಗಳನ್ನು ತಾವು ಉಪಯೋಗಿಸಿಕೊಂಡು ಇತರರೊಡನೆ ಮಾತನಾಡಿ ಅನಂತರ ಒಮ್ಮತದಿಂದ ಯಾವುದಾದರೂ ಪ್ರಶ್ನೆ ಇದ್ದರೆ ತೆಗೆದುಕೊಂಡು ಬನ್ನಿ.

ಶ್ರೀ ವಾಟಾಳ್ ನಾಗರಾಜ್:– ಒಮ್ಮತಕ್ಕೆ ಬರಬೇಕು ಶ್ರೀ ದೇಶಪಾಂಡೆರವರೇ ನಿಮ್ಮ ನಿರ್ಧಾರ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ. ಆ ವಿಷಯ ಬಹಳ ಮಹತ್ವದ್ದಾಗಿದೆ. ಆದರ ಬಗ್ಗೆ ಚರ್ಚೆ ಆಗಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇಂದ್ರ ಸರ್ಕಾರ ಹಲವಾರು ಯೋಜನೆಗಳ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದ್ದಾರೆ. ಕಾವೇರಿ ವಿಷಯವಾಗಿರಬಹುದು, ಅಥವಾ ರೈಲ್ವೆ ವಿಷಯವಾಗಿರಬಹುದು. ಹಾಗೆಯೇ ನೆರೆಹಾವಳಿಗೆ ಸರ್ಕಾರ ಪರಿಹಾರ ನೀಡುವುದರ ವಿಚಾರ ಇರಬಹುದು. ಇದು ಬಹಳ ಮಹತ್ವವಾದ ವಿಷಯ ಈ ವಿಷಯದ ಬಗ್ಗೆ ಚರ್ಚೆ ಆಗಬೇಕು ಇದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ.

2) ಶಿವಮೊಗ್ಗ–ಮಲೆನಾಡು ಎಕ್ಸ್‌ಪ್ರೆಸ್‌ನ ನಿಲುಗಡೆಯಿಂದಾದ ತೊಂದರೆ

ಶ್ರೀ ಬಿ.ಎಸ್. ಯಡಿಯೂರಪ್ಪ:– ಶಿವಮೊಗ್ಗ–ಮಲೆನಾಡು ಎಕ್ಸ್‌ಪ್ರೆಸ್‌ನ್ನು 2–3 ತಿಂಗಳಲ್ಲಿ ನಿಲ್ಲಿಸಿಬಿಡುತ್ತಾರೆ ಇದರ ಪರಿಣಾಮ ಏನು ಎಂಬುದನ್ನು ಯೋಚನೆ ಮಾಡಬೇಕು. ಅನೇಕ ವರ್ಷಗಳಿಂದ ಇರತಕ್ಕ ಸೌಲಭ್ಯವನ್ನು ನಿಲ್ಲಿಸಿಬಿಡುತ್ತಾರೆ. ಅನೇಕ ವರ್ಷಗಳಿಂದ ನಮ್ಮ ಶಿವಮೊಗ್ಗ ಜಿಲ್ಲೆಗೆ ಸಾಕಷ್ಟು ಸವಲತ್ತುಗಳು ಸಿಗುತ್ತಿಲ್ಲ. ಶ್ರೀ ದೇಶಪಾಂಡೆಯವರು ಹೇಳಿದಹಾಗೆ, ರೈಲ್ವೆ ಇಲಾಖೆ ನಮ್ಮ ರಾಜ್ಯಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ ಎಂದು ಎಲ್ಲರಿಗೂ ಗೊತ್ತು. ಇದರ ಬಗ್ಗೆ ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.